**ವ್ಯಾಖ್ಯಾನ**

# ನಿನ್ನ ದಾಸನಾಗಿ ನಿನ್ನೆಂಜಲವನುಂಡು

**ಉಗಾಭೋಗದ ಚಿಂತನೆ:**

**ನಿನ್ನ ದಾಸನಾಗಿ ನಿನ್ನೆಂಜಲವನುಂಡು**

**ನೀನುದಾಸೀನ ಮಾಡಿದರೆ ಲೋಕರು ನಗರೆ**

**ನಿನ್ನ ಚರಣ ಕಮಲವನ್ನು ಕೊರಳಲಿ ಕಟ್ಟುವೆ**

**ಪುರಂದರ ವಿಠಲ**

ಶ್ರೀಹರಿಯ ದಾಸನಾದಮೇಲೆ ಸಂಸಾರದಲ್ಲಿ ಯಾವುದೇ ತೊಂದರೆಗಳು ಬರಬಾರದು. ಮತ್ತು ಇನ್ನೊಬ್ಬರ ಅಧೀನಕ್ಕೆ ಒಳಪಡುವ ಪರಿಸ್ಥಿತಿಯೂ ಬರಬಾರದು ಎನ್ನುವುದು ಸಾಮಾನ್ಯರ ಅಭಿಪ್ರಾಯ.

ಹಾಗೆ ಸಂಸಾರದ ಅವಶ್ಯಕತೆಗಳಿಗಾಗಿ ಅಥವಾ ಇನ್ನೊಬ್ಬರ ದಬ್ಬಾಳಿಕೆಗೆ ಒಳಪಟ್ಟು ಅನ್ಯರ ದಾಸರಾದರೆ, ಹರಿಗಿರುವ ಭಕ್ತವತ್ಸಲ, ಭಯನಿವಾರಣ, ಅಪ್ರತಿಮಲ್ಲ ಎಂಬ ಬಿರುದಗಳಿಗೆ ಅರ್ಥವಿಲ್ಲದಂತೆ ಆಗಿಬಿಡುತ್ತದೆ.

ನೀನು ಕರುಣೆ, ಔದಾರ್ಯ, ವಾತ್ಸಲ್ಯ ಮುಂತಾದ ಗುಣಗಳ ಗಣಿ. ಹೀಗೆ ತಿಳಿದು ನಿನ್ನನ್ನು ಉಪಾಸನೆ ಮಾಡುವವರನ್ನು ರಕ್ಷಿಸುವ ಗುಣಪೂರ್ಣ ಎಂದು ನಂಬಿದ ದಾಸರಿಗೆ ನೀನು ಆ ಗುಣಗಳನ್ನು ಅಭಿವ್ಯಕ್ತಮಾಡದೇ ಹೋದರೆ, ನೀನು ನಿರ್ಗುಣನೆನ್ನುವವರಿಗೆ ಬಲ ಬಂದಂತಾಗುವುದಿಲ್ಲವೆ?
ಎಂದು ಶ್ರೀ ಪುರಂದರ ದಾಸರು ಪರಬ್ರಹ್ಮನಲ್ಲಿ ಕೇಳುತ್ತಿದ್ದಾರೆ.

ಅಥವಾ

ಲೋಕದಲ್ಲಿ ಜನರು ಸಾಮಾನ್ಯವಾಗಿ ತಾವು ನಂಬಿದ ದೈವ ಅನುಗ್ರಹಮಾಡಲಿಲ್ಲ ಎನಿಸಿದಾಗ ಬೇರೆ ಮಾರ್ಗ ಹುಡುಕುವರು.

ನಿನ್ನ ನಂಬಿದ ಭಕ್ತರೂ ಹೀಗೆಯೇ ಮಾಡಿದರೆ ನೀನೆಂಥ ದೈವವೆಂದು ಹಾಸ್ಯಮಾಡಿಯಾರು.

ಆದ್ದರಿಂದ ಏನೇ ಆಗಲಿ ಎಂಥದೇ ಪರಿಸ್ಥಿತಿ ಬರಲಿ ನಾನು ನಿನ್ನ ಮೇಲಿಟ್ಟ ನಂಬುಗೆ ಅಲುಗಾಡದಂತೆ ನನ್ನಲ್ಲಿ ಧೃಡವಾದ ಭಕ್ತಿ ನೀಡು, ಪ್ರಲ್ಹಾದರಾಜರಂತೆ, ಎಂದು ಬೇಡಿಕೊಳ್ಳುತ್ತಿದ್ದಾರೆ.

ಉದ್ಧವ ಶ್ರೀಕೃಷ್ಣನಿಗೆ ಹೇಳುವ ಮಾತು --
ನನಗೆ ಗೊತ್ತು ನಿನ್ನ ದಾಸನೆನಿಸಿ ನಿನ್ನ ಎಂಜಲುಂಡರೆ ನಿನ್ನ ಮಾಯೆಯನ್ನು ಗೆಲ್ಲುವ ಶಕ್ತಿ ಅಂದರೆ ಸಂಸಾರ ಗೆಲ್ಲುವ ಸಾಮರ್ಥ್ಯವನ್ನು ನೀನು ಕೊಟ್ಟೇ ಕೊಡುತ್ತಿಯಾ" ಎಂದು.

ದಾಸನಾಗಿ ಎಂಜಲುಣ್ಣುವುದು ಎಂದರೇನು?

**"ವ್ಯಾಸೋಚ್ಛಿಷ್ಟಂ ಜಗತ್ಸರ್ವಂ"** ಎನ್ನುವಂತೆ ಅಪೌರುಷೇಯವಾದ ವೇದಗಳ ಅರ್ಥ ತಿಳಿದು ಅಪರೋಕ್ಷಜ್ಞಾನಿಯಾಗಿ ಉದ್ಧಾರವಾಗಬೇಕಾದರೆ ವ್ಯಾಸರು ರಚಿಸಿದ ಸೂತ್ರಗಳು, ಪುರಾಣೇ-ತಿಹಾಸಗಳ ಅವಲಂಬಿಸುವುದು ಅನಿವಾರ್ಯ. ಇದು ನಿನ್ನ ಎಂಜಲುಣ್ಣುವುದು.

ಇನ್ನು ವೇದೋಪನಿಷತ್ ಗಳು ಹರಿ ಸರ್ವೋತ್ತಮತ್ವವನ್ನು ಪ್ರತಿಪಾದಿಸುತ್ತವೆ ಎಂದು ತಿಳಿಯುವುದು ದಾಸನಾಗುವುದು.

ಇದನ್ನೇ ಶ್ರೀ ಜಗನ್ನಾಥ ದಾಸರು ಹೀಗೆ ತಿಳಿಸುತ್ತಾರೆ

ಆ ಪರಬ್ರಹ್ಮನಲಿ ತ್ರಿಜಗದ್ವ್ಯಾಪಕತ್ವ, ನಿಯಾಮಕತ್ವ, ಸ್ಥಾಪಕತ್ವ, ವಶಿತ್ವ, ಈಶಿತ್ವಾದಿ ಗುಣಗಳಿಗೆ /

ಲೋಪವಿಲ್ಲೇಕ ಪ್ರಕಾರ ಸ್ವರೂಪವೆನಿಪವು ಸರ್ವಕಾಲದಿ ಪೋಪವಲ್ಲವು ಜೀವರಿಗೆ ದಾಸತ್ವದೋಪಾದಿ//

ಹೀಗೆ ತಿಳಿಯುವುದೇ ದಾಸನಾಗುವುದು.

ಅದನ್ನೆಂದೂ ಬಿಡಿಸದಿರು.ನಿನ್ನ ಗುಣಗಳಲ್ಲಿ ನಂಬುಗೆ ಕೊಡು ಎಂದು ಬೇಡಿಕೊಳ್ಳಬೇಕೆನ್ನುವುದು ದಾಸರ ಅಭಿಪ್ರಾಯ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ